## ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಡಾ: ವೈ ಎ ನಾರಾಯಣಸ್ವಾಮಿ ಇವರು ಮಂಡಿಸಿರುವ ಶೂನ್ಯ ವೇಳೆಯ ಪ್ರಸ್ತಾವನೆಗೆ ಉತ್ತರ

**ಪ್ರಶ್ನೆ:**

**ಬೆಂಗಳೂರು ನಗರ ಹೃದಯ ಭಾಗದಲ್ಲಿರುವ ಉಪ್ಪಾರಪೇಟೆ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿರುವ 'ತುಳಸಿವನ' ದಲ್ಲಿ ಬಹಳ ಪುರಾತನವಾದ ನಾಗರಕಟ್ಟೆ ಇದೆ. ಈ ನಾಗರಕಟ್ಟೆ ಬಹಳ ಶಿಥಿಲಾವಸ್ಥೆಯಲ್ಲಿದ್ದನ್ನು ಕಂಡು ಶ್ರೀ ಪುನೀತ್ ಕೆರೆಹಳ್ಳಿ ಎಂಬ ಹಿಂದೂ ಕಾರ್ಯಕರ್ತರೊಬ್ಬರು, ಆ ನಾಗರಕಟ್ಟೆಯನ್ನು ಜೀರ್ಣೋದ್ಧಾರವನ್ನು ಮಾಡಿ, ತತ್ಸಂಬಂದವಾದ ಪೂಜೆ ಹಮ್ಮಿಕೊಂಡಿದ್ದು, ಸದರಿ ಪೂಜೆಗೆ ಎಲ್ಲಾ ಭಕ್ತಾದಿಗಳು ಕುಟುಂಬ ಸಮೇತವಾಗಿ ಭಾಗವಹಿಸಬೇಕೆಂದು ತಮ್ಮ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ಉಪ್ಪಾರಪೇಟೆಯ ಪೊಲೀಸ್ ಇನ್ಸ್‌ಪೆಕ್ಟರ್ ರವರು ಪುನೀತ್ ರವರಿಗೆ ನೋಟೀಸ್ ನೀಡಿ ಪೂಜಾ ಕಾರ್ಯಕ್ರಮಕ್ಕೆ ಬಿ.ಬಿ.ಎಂ.ಪಿ. ಯ ಅನುಮತಿ ಪಡೆಯಬೇಕೆಂಬ ಪೊಲೀಸ್ ಇನ್ಸ್‌ಪೆಕ್ಟರ್ ರವರ ಬೆದರಿಕೆ ಹಿಂದೂಗಳ ಭಾವನೆಗೆ ಧಕ್ಕೆ ತಂದಿದೆ ಹಾಗೂ ಇದು ಹೊಸ ನಾಗರಕಟ್ಟೆ ಅಲ್ಲ, ಆದರೆ ಇದು ಬಹಳ ಪುರಾತನ ಕಾಲದ ನಾಗರಕಟ್ಟೆ ಎಂದು ತಿಳಿದಿದ್ದರೂ ಸಹ ಪೊಲೀಸರ ಈ ವರ್ತನೆ ಹಿಂದೂಗಳ ಹಾಗೂ ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದಿರುವುದರಿಂದ ತಕ್ಷಣವೇ ಈ ನೋಟೀಸನ್ನು ವಾಪಸ್ಸು ಪಡೆಯಬೇಕು ಹಾಗೂ ಸದರಿ ಪೊಲೀಸ್ ಇನ್ಸ್‌ಪೆಕ್ಟರ್ ಮೇಲೆ ಕ್ರಮ ಜರುಗಿಸುವ ಕುರಿತು.**

**ಉತ್ತರ:**

ದಿನಾಂಕ: 07/07/2023 ರಂದು ಶ್ರೀ ಪುನೀತ್ ಕೆರೆಹಳ್ಳಿ ಇವರು ರಾಷ್ಟ್ರ ರಕ್ಷಣಾ ಪಡೆ, ಬಸವನಗುಡಿ ಸಂಘಟನೆಯ ವತಿಯಿಂದ ನಾಗರಕಟ್ಟೆ ದೇವಸ್ಥಾನದಲ್ಲಿ ಪ್ರತಿ ಶನಿವಾರ ಮತ್ತು ಭಾನುವಾರ ವಿಶೇಷ ಪೂಜೆ ಅದರ ಜೊತೆ ಧರ್ಮ ಶಿಕ್ಷಣ ಕಾರ್ಯಕ್ರಮ ನಡೆಸಲು ಅನುಮತಿ ಕೋರಿ ಸಲ್ಲಿಸಿದ್ದ ಮನವಿ ಮೇರೆಗೆ ನಿಯಮಾನುಸಾರವಾಗಿ ಸಾರ್ವಜನಿಕ ಸ್ಥಳದಲ್ಲಿ ಕಾರ್ಯಕ್ರಮ ನಡೆಸಲು ಸಕ್ಷಮ ಪ್ರಾಧಿಕಾರದ ಅನುಮತಿ ಪಡೆದಿರುವ ಬಗ್ಗೆ ಮಾಹಿತಿ ಕೇಳಿ ದಿನಾಂಕ: 09/07/2023 ರಂದು ಪೊಲೀಸ್ ಇನ್ಸ್‌ಪೆಕ್ಟರ್, ಉಪ್ಪಾರಪೇಟೆ ಪೊಲೀಸ್ ಠಾಣೆ ಇವರು ರಾಷ್ಟ್ರ ರಕ್ಷಣಾ ಪಡೆಯ ಶ್ರೀ ಪುನೀತ್ ಕೆರೆಹಳ್ಳಿ ರವರಿಗೆ ನೋಟಿಸ್ ನೀಡಿರುತ್ತಾರೆ.

ಶ್ರೀ ಪುನೀತ್ ಕೆರೆಹಳ್ಳಿ ರವರು ಕ್ರಿಮಿನಲ್ ಹಿನ್ನೆಲೆಯುಳ್ಳ ವ್ಯಕ್ತಿಯಾಗಿದ್ದು, ಸಾರ್ವಜನಿಕ ಸುವ್ಯವಸ್ಥೆ ನಿರ್ವಹಣೆಯ ಉದ್ದೇಶದಿಂದ ನಿಯಮಾನುಸಾರ ಆತನಿಗೆ ನೋಟಿಸ್ ನೀಡಲಾಗಿರುತ್ತದೆಯೇ ಹೊರತು, ಹಿಂದೂ ಧಾರ್ಮಿಕ ಭಾವನೆಗಳಿಗೆ ಧಕ್ಕೆಯುಂಟು ಮಾಡಿರುವುದಿಲ್ಲ.

---

ಹೆಚ್‌ಡಿ 346 ಎಸ್‌ಎಸ್‌ಟಿ 2023

**(ಡಾ: ಜಿ.ಪರಮೇಶ್ವರ)**
ಗೃಹ ಸಚಿವರು.